# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರರಿಗೆ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆ ಕಿಟ್ ಮೌಲ್ಯವನ್ನು ರೂ.5,000-00 ಗಳಿಂದ ರೂ.10,000-00ಗಳಿಗೆ ಹೆಚ್ಚಿಸಿ ಯೋಜನೆಯನ್ನು ಮಾರ್ಪಡಿಸುವಿಕೆ.

ಓದಲಾಗಿದೆ:- (1) ಆದೇಶ ಸಂಖ್ಯೆ:ಪಸಂಮೀ/105/ಮೀಇಯೋ/2009, ದಿನಾಂಕ:16-07-2009

(2) ಆದೇಶ ಸಂಖ್ಯೆ:ಪಸಂಮೀ/188/ಮೀಇಯೋ/2013, ದಿನಾಂಕ:28-08-2013.

(3) ಪತ್ರ ಸಂಖ್ಯೆ:ಪಂವಾಯೋ(1)/114/2012-13, ದಿನಾಂಕ:26-07-2013.

******

## ಪ್ರಸ್ತಾವನೆ:

2013-14ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-117ರಲ್ಲಿ ಮೀನುಗಾರರಿಗೆ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆಗಳ ಕಿಟ್‌ನ ಮೌಲ್ಯವನ್ನು ರೂ.5,000-00 ಗಳಿಂದ ರೂ.10,000-00ಗಳಿಗೆ ಹೆಚ್ಚಿಸಲಾಗುವುದೆಂದು ರಾಜ್ಯ ಸರ್ಕಾರವು ಘೋಷಿಸಿದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, 2009-10ನೇ ಸಾಲಿನಿಂದ "ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ" ಎಂಬ ಹೊಸ ಯೋಜನೆಯನ್ನು ಕಾರ್ಯವಿಧಾನವನ್ನೊಳಗೊಂಡಂತೆ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ವಿತರಿಸುವ ಯೋಜನೆಯನ್ನು 2013-14ನೇ ಸಾಲಿಗೆ ಮುಂದುವರೆಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ರಾಜ್ಯದಲ್ಲಿ ಒಟ್ಟು 5.20 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶ ಹೊಂದಿದ್ದು ಇದರಲ್ಲಿ 2.27 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣ ಪ್ರದೇಶವುಳ್ಳ 74 ಜಲಾಶಯಗಳನ್ನು, 2.93 ಲಕ್ಷ ಹೆಕ್ಟೇರ್ ಜಲವಿಸ್ತೀರ್ಣವುಳ್ಳ ಕೆರೆ ಕೊಳಗಳಿದ್ದು, ಹಾಗೂ 5813 ಕಿ.ಮೀ.ಗಳಷ್ಟು ಉದ್ದದ ನದಿಗಳು ಒಳನಾಡು ಸಂಪನ್ಮೂಲಗಳಾಗಿದ್ದು, ಮೀನು ಉತ್ಪಾದನೆಗೆ ವಿಪುಲ ಅವಕಾಶವನ್ನು ಒದಗಿಸಿದ್ದು, ರಾಜ್ಯದಲ್ಲಿ ಸುಮಾರು 2.87 ಲಕ್ಷ ಮೀನುಗಾರರು ಸಕ್ರಿಯ ಮೀನುಗಾರಿಕೆಯಲ್ಲಿ ತೊಡಗಿದ್ದು, ದಿನನಿತ್ಯದ ಜೀವನಕ್ಕೆ ಮೀನುಗಾರಿಕೆಯನ್ನೇ ಅವಲಂಬಿಸಿದ್ದಾರೆಂದು ತಿಳಿಸಿರುತ್ತಾರೆ.

ಮುಂದುವರೆದು, ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಸುಮಾರು 6600 ವಿವಿಧ ಬಗೆಯ ಯಾಂತ್ರೀಕೃತವಲ್ಲದ ಮೀನುಗಾರಿಕೆ ದೋಣಿಗಳು (ಪಾತಿ ದೋಣಿ, ರಂಪಣಿ ದೋಣಿ ಇತ್ಯಾದಿ) ಕಾರ್ಯಾಚರಿಸುತ್ತಿವೆ ಎಂದು, ಸದರಿ ದೋಣಿಗಳನ್ನು ಬಳಸಿ ಮೀನುಗಾರಿಕೆ ನಡೆಸುವ ಬಡ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಒದಗಿಸುವುದು ಅತ್ಯಗತ್ಯ. ಆದರೆ ಇತ್ತೀಚಿನ ದಿನಗಳಲ್ಲಿ ಮೀನು ಹಿಡುವಳಿಗೆ ಅವಶ್ಯವಿರುವ ಬಲೆ ಮತ್ತಿತರ ಪರಿಕರಗಳ ಬೆಲೆಯು ಹೆಚ್ಚಾಗಿರುವುದರಿಂದ ರೂ.5,000-00 ಮೌಲ್ಯದಲ್ಲಿ ಅವುಗಳನ್ನು ಮೀನುಗಾರರಿಗೆ ಒದಗಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಮೀನುಗಾರರಿಗೆ ಉಚಿತವಾಗಿ

-2-

ನೀಡುವ ಮೀನುಗಾರಿಕೆ ಸಲಕರಣೆ ಕಿಟ್‌ನ ಮೌಲ್ಯವನ್ನು ರೂ.5,000-00 ಗಳಿಂದ ರೂ.10,000-00 ಗಳಿಗೆ ಹೆಚ್ಚಿಸುವುದಾಗಿ ಆಯವ್ಯಯ ಭಾಷಣದಲ್ಲಿ ಘೋಷಿಸಿರುವುದರಿಂದ, ಆದೇಶ ಸಂಖ್ಯೆ: ಪಸಂಮೀ/105/ಮೀಇಯೋ/2009 ದಿನಾಂಕ:16/07/2009ರ ಷರತ್ತು ಮತ್ತು ನಿಬಂಧನೆಗಳಿ ಗನುಗುಣವಾಗಿ ಸದರಿ ಯೋಜನೆಯಡಿ ಮೀನುಗಾರರಿಗೆ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆ ಕಿಟ್‌ನ ಮೌಲ್ಯವನ್ನು ರೂ.5,000-00ಗಳಿಂದ ರೂ.10,000-00ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ಯೋಜನಾ ಇಲಾಖೆಯು ಆಯವ್ಯಯ ಲಭ್ಯತೆಯೊಳಗೆ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಈಗಾಗಲೇ ಲಾಭ ಪಡೆದ ಫಲಾನುಭವಿಗಳ ಜಿಲ್ಲಾವಾರು ವಿಘಟನೆಯ (break up) ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ದಾಖಲಿಸುವ ಷರತ್ತಿಗೊಳಪಟ್ಟು ಸಹಮತಿಸಿರುತ್ತದೆ. ಹಾಗೂ ಆರ್ಥಿಕ ಇಲಾಖೆಯು 2013-14ನೇ ಸಾಲಿನ ಆಯವ್ಯಯ ಅನುದಾನದ ಮಿತಿಗೊಳಪಟ್ಟು ಮಾರ್ಪಡಿಸಲು ಸಹಮತಿ ನೀಡಿರುತ್ತದೆ. ಮುಂದುವರೆದು, ದಿನಾಂಕ:31-08-2013ರಂದು ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಸಿ.ಆ.ಸು. (ಆ.ಸು.) ಇಲಾಖೆಯ ಕಾರ್ಯದರ್ಶಿಗಳನ್ನೊಳಗೊಂಡಂತೆ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿಯು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಹಮತಿಸಿ ಕೂಡಲೇ ಆದೇಶವನ್ನು ಹೊರಡಿಸಲು ಸೂಚಿಸಿದ ಹಿನ್ನೆಲೆಯಲ್ಲಿ ಹಾಗೂ ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ.

**ಆದೇಶ ಸಂಖ್ಯೆ:ಪಸಂಮೀ 170 ಮೀಇಯೋ 2013, ಬೆಂಗಳೂರು ದಿನಾಂಕ:04-09-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ:ಪಸಂಮೀ/105/ ಮೀಇಯೋ/2009, ದಿನಾಂಕ:16-07-2009ರ ಆದೇಶವನ್ನು ಭಾಗಶಃ ಮಾರ್ಪಡಿಸಿ "ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ" ಮುಂದುವರಿದ ಯೋಜನೆಯಡಿ 2013-14ನೇ ಸಾಲಿನಿಂದ ಅನ್ವಯವಾಗುವಂತೆ ಮೀನುಗಾರರಿಗೆ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆ ಕಿಟ್‌ನ ಮೌಲ್ಯವನ್ನು ರೂ.5,000-00 ಗಳಿಂದ ರೂ.10,000-00 (ಹತ್ತು ಸಾವಿರ ರೂಪಾಯಿಗಳು ಮಾತ್ರ)ಗಳಿಗೆ ಹೆಚ್ಚಿಸಿ, 2013-14ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಮಿತಿಯೊಳಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ಸದರಿ ಯೋಜನೆಯಡಿ ಈಗಾಗಲೇ ಲಾಭ ಪಡೆದ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿನ ಫಲಾನುಭವಿಗಳ ಜಿಲ್ಲಾವಾರು ವಿಘಟನೆಯ (break up) ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಅಂತಹ ಫಲಾನುಭವಿಗಳನ್ನು ಕೈಬಿಡುವ ಷರತ್ತಿಗೊಳಪಟ್ಟು ಹಾಗೂ ದಿನಾಂಕ:16-07-2009ರ ಆದೇಶದಲ್ಲಿನ ಕಾರ್ಯವಿಧಾನ, ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಸದರಿ ವೆಚ್ಚವನ್ನು 2013-14ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ-00-110-ಮೀನು ಹಿಡಿಯುವ ದೋಣಿಗಳ ಯಾಂತ್ರೀಕರಣ ಮತ್ತು ಸುಧಾರಣೆ-0-02-ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (ಯೋಜನೆ)-106-ಸಹಾಯಧನ ಅಡಿ ರೂ.300.00 ಲಕ್ಷ ಹಾಗೂ 422-ವಿಶೇಷ ಘಟಕ ಯೋಜನೆಯಡಿ ರೂ.50.00 ಲಕ್ಷ ಮತ್ತು 423-ಗಿರಿಜನ ಉಪ ಯೋಜನೆಯಡಿ ರೂ.20.00 ಲಕ್ಷ ಹೀಗೆ ಒಟ್ಟು ರೂ.370.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

-3-

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ/50/ಪಿಎಫ್‌ಓ/2013 ದಿನಾಂಕ:19-08-2013ರಲ್ಲಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/487/ವೆಚ್ಚ-4/2013, ದಿನಾಂಕ:31-08-2013ರಲ್ಲಿ ಹಾಗೂ ದಿನಾಂಕ:31-08-2013ರಂದು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಯುಕ್ತ ಸಮಿತಿಯ ನಿರ್ಣಯದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಜಯಣ್ಣ) 4/9
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

4/9

**ಇವರಿಗೆ:**

1) ಮಹಾಲೇಖಪಾಲರು (ಎ ಮತ್ತು ಇ)(ಎಯು-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4). ವಿಧಾನಸೌಧ, ಬೆಂಗಳೂರು.
6) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
7) ಸಮನ್ವಯ/ವಾರಪತ್ರಿಕೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.